# 40. ಹೊಲದಲ್ಲಿ ಪ್ರಾಣಿಗಳನ್ನು ಬೆದರಿಸುವ ಗನ್

ಹೆಸರು ಮತ್ತು ವಿಳಾಸ : ಶ್ರೀ ಸಿದ್ದಲಿಂಗೇಶ್ವರ ಕಲಿವಾಳ
ಗ್ರಾಮ : ಇಬ್ರಾಹಿಂಪುರ
ತಾ : ಶಿಗ್ಗಾಂವ್
ಜಿ : ಹಾವೇರಿ
ಮೊ : 9743759403

## ವಿಶೇಷ ತಾಂತ್ರಿಕತೆಗಳು







- ಇತ್ತೀಚೆಗೆ ಬೆಳೆಗಳಿಗೆ ಪ್ರಾಣಿಗಳ ಹಾವಳಿ ಹೆಚ್ಚಾಗಿರುವುದು ಸಾಮಾನ್ಯ. ಅವುಗಳ ನಿಯಂತ್ರಣಕ್ಕಾಗಿ ಗನ್ ಆವಿಷ್ಕಾರ.
- **ಗನ್ ತಯಾರಿಸಲು ಬೇಕಾಗುವ ಸಾಮಗ್ರಿಗಳು:**
  - ಒಂದೂವರೆ ಇಂಚಿನ ಎರಡೂವರೆ ಘೂಟಿನ ಪೈಪು
  - ನಾಲ್ಕು ಇಂಚಿನ ಒಂದೂವರೆ ಘೂಟ್ ಪೈಪು
  - ಒಂದು ಮುಚ್ಚಳ ನಾಲ್ಕು ಇಂಚು
  - ಒಂದು ರೆಡ್ಯೂಸರ್ 1 ಬದಿ ನಾಲ್ಕು ಇಂಚು, ಒಂದು ಬದಿ ಒಂದೂವರೆ ಇಂಚು
  - ಒಂದು ಗ್ಯಾಸ ಒಲೆ ಲೈಟರ್
- **ಗನ್ ತಯಾರಿ ಮಾಡುವ ವಿಧಾನ:** 4 ಇಂಚಿನ ಪ್ಲಾಸ್ಟಿಕ್ ಪೈಪನ್ನು ಒಂದೂವರೆ ಘೂಟ್ ಕತ್ತರಿಸಿ ಅದಕ್ಕೆ ಒಂದು ಬದಿ 4 ಇಂಚಿನ ಮುಚ್ಚಳ ಹಾಕಿ ಇನ್ನೊಂದು ಬದಿ ನಾಲ್ಕೂವರೆ ಇಂಚಿನ ರೆಡ್ಯೂಸರ್ ಹಾಕಿ, 4 ಇಂಚಿನ ಪೈಪಿಗೆ ಮಧ್ಯ ಭಾಗದಲ್ಲಿ ಒಂದು ರಂದ್ರ ಹಾಕಿ ಅದರಲ್ಲಿ ಗ್ಯಾಸ ಒಲೆ ಲೈಟರ್ ಹಾಕಿ ಎಮ್‌ಸೀಲ್‌ನಿಂದ ಪ್ಯಾಕ್ ಮಾಡಬೇಕು. ನಂತರ ಒಂದೂವರೆ ಇಂಚಿನ ಪೈಪಿನಲ್ಲಿ ರದ್ದೀ ಹಾಳೆಯಲ್ಲಿ ಒಂದು ಕಲ್ಲನ್ನು ಸುತ್ತಿ ಹಾಕಬೇಕು. ನಂತರ 4 ಇಂಚಿನ ಪೈಪಿನಲ್ಲಿ 2 ಅಥವಾ 3 ಬಾರಿ ಸುಗಂಧ ದ್ರವ್ಯದ (ಪರ್ಫ್ಯೂಮ್) ಸ್ಪ್ರೇ ಮಾಡಿ, ಒಂದೂವರೆ ಇಂಚಿನ ಪೈಪನ್ನು 4 ಇಂಚಿನ ಪೈಪಿಗೆ ಜೋಡಿಸಬೇಕು. ಕೆಲವು ಕ್ಷಣಗಳ ನಂತರ ಪ್ರಾಣಿ- ಪಕ್ಷಿಗಳು ಕಂಡುಬಂದರೆ ಲೈಟರನ್ನು ಒತ್ತಿದಾಗ ಭಯಂಕರ ಶಬ್ದವಾಗುತ್ತದೆ. ಇದರಿಂದ ಪ್ರಾಣಿ–ಪಕ್ಷಿಗಳು ಭಯಗೊಂಡು ಓಡಿ ಹೋಗುತ್ತವೆ. ಈ ರೀತಿಯಾಗಿ ಬೆಳೆಗಳಿಗೆ ಪ್ರಾಣಿ–ಪಕ್ಷಿಗಳಿಂದ ಉಂಟಾಗುವ ಹಾನಿಯನ್ನು ತಪ್ಪಿಸಬಹುದು.

ಮಾಹಿತಿಯ ಮೂಲ: ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ